ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/52/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:24.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಸುಮಾರು 2 ವಾರಕ್ಕೂ ಮೊದಲೇ ಎಲ್ಲಾ ಜಿಲ್ಲೆಗಳ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ವಾಟ್ಸ್‌ಪ್ ಮೂಲಕ ಸೂಚನೆಗಳನ್ನು ನೀಡಲಾಗಿದ್ದು, ಮತ್ತೊಮ್ಮೆ ಪುನ: ಈ ಕೆಳಕಂಡಂತೆ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಸೂಚಿಸಲಾಗಿದೆ.

1) ಪೋಷಕರಿಬ್ಬರೂ ಕೋವಿಡ್-19 ಬಾಧಿತರು ಅಥವಾ ಸೋಂಕಿತರಾಗಿ, ಕ್ವಾರಂಟೈನ್ ಅಥವಾ ಐಸೋಲೇಷನ್‌ನಲ್ಲಿದ್ದರೆ ಅಂತಹ ಪೋಷಕರ ಮಕ್ಕಳನ್ನು ನೋಡಿಕೊಳ್ಳಲು ಅವರ ಕುಟುಂಬದಲ್ಲಿ ಯಾವುದೇ ಸೂಕ್ತ ಅನುಕೂಲಗಳಿಲ್ಲದೇ ಇದ್ದಲ್ಲಿ ಅಂತಹ ಮಕ್ಕಳ ಪಾಲನೆ ಮತ್ತು ರಕ್ಷಣೆ ಸಲುವಾಗಿ ಹಾಗೂ ಮಕ್ಕಳೇ ಕೋವಿಡ್-19 ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕ್ವಾರಂಟೈನ್‌ನಲ್ಲಿ ಇರಬೇಕಾದರೆ ಅಥವಾ ಆಸ್ಪತ್ರೆಯಲ್ಲಿ ಕೋವಿಡ್-19 ಚಿಕಿತ್ಸೆ ಮುಗಿಸಿಕೊಂಡು ಚಿಕಿತ್ಸೆ ನಂತರ ಕ್ವಾರಂಟೈನ್‌ನಲ್ಲಿ ಇಡಬೇಕಾದಂತಹ ಮಕ್ಕಳ ಪಾಲನೆ ಮತ್ತು ರಕ್ಷಣೆ ಸಲುವಾಗಿ ಸೂಕ್ತ ಮಕ್ಕಳ ಪಾಲನಾ ಸಂಸ್ಥೆ ಅಥವಾ ಫಿಟ್ ಇನ್ಸ್ಟಿಟ್ಯೂಟ್‌ಗಳನ್ನು ಅಥವಾ ಫಿಟ್ ಪರ್ಸನ್‌ರವರನ್ನು ಗುರುತಿಸುವುದು ಹಾಗೂ ಈ ವ್ಯವಸ್ಥೆಗಳನ್ನು ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರನ್ವಯ ಮಕ್ಕಳನ್ನು ಸ್ವೀಕರಿಸಲು ಸಿದ್ಧಪಡಿಸಿಕೊಳ್ಳುವುದು.

2) ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಸಿಬ್ಬಂದಿಗಳು ಉದಾಹರಣೆಗೆ ಆಯಾ, ಅಡುಗೆಯವರು ಕೋವಿಡ್-19 ಬಾಧಿತರು ಅಥವಾ ಸೋಂಕಿತರಾಗಿ, ಕ್ವಾರಂಟೈನ್ ಅಥವಾ ಐಸೋಲೇಷನ್‌ಗೆ ಒಳಪಡಿಸಬೇಕಾದ ಸಂದರ್ಭ ಬಂದಲ್ಲಿ ತಕ್ಷಣ ಅವರು ನಿರ್ವಹಿಸುತ್ತಿದ್ದ ಕರ್ತವ್ಯವನ್ನು ಮತ್ತೊಬ್ಬರಿಗೆ ವಹಿಸುವ ಸಲುವಾಗಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವುದು.

ಈ ಮೇಲಿನಂತೆ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಂಡು ಈ ಬಗ್ಗೆ ಮಾಹಿತಿಯನ್ನು ಲಗತ್ತಿಸಿದ ನಮೂನೆಯಲ್ಲಿ ಪ್ರಧಾನ ಕಛೇರಿಗೆ 3ದಿನಗಳೊಳಗೆ ಸಲ್ಲಿಸಲು ಸೂಚಿಸಿದೆ.

ಕು. ಯಲ್ಲವ್ವ, ಸಂಶೋಧನಾಧಿಕಾರಿ ಇವರು ಈ ಬಗ್ಗೆ ಎಲ್ಲಾ ಜಿಲ್ಲೆಗಳೊಂದಿಗೆ ಫಾಲೋಅಪ್ ಮಾಡಿ ಮೇಲಿನ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಂಡಿರುವ ಬಗ್ಗೆ 30 ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೊಂದಿಗೆ ಖಚಿತಪಡಿಸಿಕೊಳ್ಳತಕ್ಕದ್ದು ಹಾಗು ಈ ಬಗ್ಗೆ ಲಗತ್ತಿಸಿದ ನಮೂನೆಯಂತೆ ಮಾಹಿತಿಯನ್ನು ಕ್ರೂಢೀಕರಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ
24.04.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

| Information Regarding COVID-19 Emergency Arrangements | | | | |
|---|---|---|---|---|
| Sl.No | District | Name of CCI/Fit Institution/Fit person Kept ready | Whether Alternate Staff List is kept ready (YES/NO) | Remarks |

Date

DCPO Seal and Signature